ಪರ ವಿರುದ್ಧ ಮಾತನಾಡುವುದಕ್ಕೆ ಹೋಗುವುದಿಲ್ಲ. ನೀವೇ ನಿಮ್ಮ ಸರ್ಕಾರ ಒಂದು ನಿರ್ಧಾರ ನಿಮ್ಮ ಸಚಿವ ಸಂಪುಟ, ತಾವೇ ಇನ್ನು ಯಾರನ್ನು ಕೇಳಬೇಕಾಗಿಲ್ಲ. ಸಭೆ ಇದೆ, ಈ ಸಭೆಯಲ್ಲಿ ಚರ್ಚೆ ಮಾಡಬೇಕು, ಅಥವಾ ಬೇರೆ ಕಡೆ ಕರೆದು ಮಾತನಾಡಬೇಕು. ಏನು ಯಾವುದೂ ಹೇಳದೆ ಕೇಳದೆ ನೀವು ಹಿಂದೆ ಪಡೆಯತಕ್ಕದ್ದು ಒಂದಾಯಿತು. ಮತ್ತೆ ಶ್ರೀ ಶಿವರಾಮ ಕಾರಂತರದ್ದು ಹಿಂದೆ ಪಡೆದಿದ್ದೀರಿ. ನಾನು ಅದರ ಪರ, ವಿರುದ್ಧ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಸಭೆಯಲ್ಲಿ ಇಂಥದ್ದೆಲ್ಲ ಚರ್ಚೆಯಾಗಬೇಕು. ಚರ್ಚೆಯಾಗದೆ ಏಕಾಏಕಿಯಾಗಿ ಅದನ್ನು ಹಿಂದೆ ಪಡೆಯತಕ್ಕ ಪ್ರವೃತ್ತಿ ಏನಿದೆ ಅದು ಒಳ್ಳೆಯದಲ್ಲ. ಅದು ಒಳ್ಳೆಯ ಸಂಪ್ರದಾಯವು ಅಲ್ಲ. ಅದನ್ನು ನಾವು ರದ್ದು ಮಾಡಿಲ್ಲ. ಹಿಂದೆ ಪಡೆದಿದ್ದೇವೆಂದರೆ ಎರಡೂ ಒಂದೇ ಸ್ವಲ್ಪ ಹೆಚ್ಚು ಕಡಿಮೆ. ಅಲ್ಲದೆ ಇನ್ನೇನು? ಅದರ ಅರ್ಥವೇನು?

ಅಧ್ಯಕ್ಷರು:- ಚರ್ಚೆಗೆ ತೆಗೆದುಕೊಳ್ಳೋಣ, ಚರ್ಚೆ ಮಾಡೋಣ.

ಒಬ್ಬ ಮಾನ್ಯ ಸದಸ್ಯರು:- ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ. ಎಲ್ಲಾ ಶಾಸಕರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ತಾವು ಚರ್ಚೆಗೆ ಅವಕಾಶ ಕೊಡಿ. ಈಗಾಗಲೇ ಅವರು ಮನನೊಂದು ತಾವು ಕೊಟ್ಟಿರತಕ್ಕ ಎಲ್ಲಾ ಗೌರವಗಳನ್ನು ಹಿಂದಿರುಗಿಸಿದ್ದಾರೆ.

ಅಧ್ಯಕ್ಷರು:ಚರ್ಚೆಗೆ ತೆಗೆದುಕೊಳ್ಳುತ್ತೇವೆ. ಆದ್ದರಿಂದ ಇದನ್ನು ಇಲ್ಲಿಗೆ ಬಿಟ್ಟು ಬಿಡೋಣ. ಈಗ ಪುಟ್ಟಣ್ಣಯ್ಯನವರು.

ಶ್ರೀ ವಾಟಾಳ್ ನಾಗರಾಜ್: ನನ್ನ ಪ್ರಶ್ನೆ, ತಾವು ಚರ್ಚೆ ಮಾಡುವುದಕ್ಕೆ ಒಂದು ಅವಕಾಶ ಮಾಡಿಕೊಡಿ ಚರ್ಚೆ ನಡೆಯಲಿ.

4. ಉರ್ದು ಗಲಾಟೆಯಲ್ಲಿ ಪ್ರೊ.ನಂಜುಂಡಸ್ವಾಮಿಯವರ ಕಾರು ಸುಟ್ಟು ಹೋಗಿರುವುದಕ್ಕೆ ಪರಿಹಾರ

ಶ್ರೀ ಕೆ.ಎನ್.ಪುಟ್ಟಣ್ಣಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಪ್ರೊ:ನಂಜುಂಡಸ್ವಾಮಿಯವರ ಕಾರು ಉರ್ದು ಗಲಾಟೆಯಲ್ಲಿ ಸುಟ್ಟುಹೋಯಿತು. ಆಗ ಅಲ್ಲಿ ಯಾವುದೇ ಪೋಲೀಸ್ ವ್ಯವಸ್ಥೆಯಾಗಲಿ ಯಾವುದೇ ರಕ್ಷಣೆಯಾಗಲಿ ಇರಲಿಲ್ಲ. ಒಂದು ದೊಡ್ಡ ಮಾಬ್ ಇತ್ತು. ಗಲಾಟೆಯಲ್ಲಿ ಕಾರು ಸುಟ್ಟು ಹೋಗಿ ಸುಮಾರು ಹತ್ತು ತಿಂಗಳಾಯಿತು. ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮಾನ್ಯ ಗೃಹ ಮಂತ್ರಿಗಳಿಗೆ ಲಿಖಿತ ಮೂಲಕ ತಂದಿದ್ದೇನೆ; ಅವರ ಗಮನಕ್ಕೂ ತಂದಿದ್ದೇನೆ. ಅವರು ಹೇಳಿದರು, ಮುಖ್ಯ ಮಂತ್ರಿಗಳ ಟೇಬಲ್‌ನಲ್ಲಿ ವಿಷಯ ಇದೆ, ಅವರು ಏನು ತೀರ್ಮಾನ ಮಾಡುತ್ತಾರೆಂದು ನೋಡಬೇಕು, ಇನ್ನೂ ಕಾಲಾವಕಾಶ ಬೇಕಾಗುತ್ತದೆಂದು ಹೇಳಿ 3-4 ತಿಂಗಳಾಯಿತು ಅವರು ನಾವು ಮಾತನಾಡಿ. ಆದ್ದರಿಂದ ಅದರ ಬಗ್ಗೆ ಸರ್ಕಾರದ ನಿಲುವು ಏನು? ಸರ್ಕಾರ ಏತಕ್ಕೆ ಕಾಲ ವಿಳಂಬ ಮಾಡುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ಸಮಂಜಸವಾದ ಉತ್ತರವನ್ನು ಮಾನ್ಯ ಗೃಹ ಮಂತ್ರಿಗಳು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ಈ ಬಗ್ಗೆ ಸರ್ಕಾರಕ್ಕೆ ಅನೇಕ ಮನವಿಗಳನ್ನು ನಾವು ಸಲ್ಲಿಸಿದ್ದೇವೆ. ಅವರು ಬೇಡಿಕೊಂಡು ಕಾಡಿಕೊಂಡು ನನ್ನ ಕಾರು ಸುಟ್ಟುಹೋಗಿದೆ, ಪರಿಹಾರ ಕೊಡಿ, ನನಗೆ ಹಣ ಕೊಡಿ ಎಂದು ಕೇಳಲಿಲ್ಲ. ಅದು ನಮ್ಮ ಕರ್ತವ್ಯ. ಸರ್ಕಾರದ ಕರ್ತವ್ಯ.

ಇಂಥ ಸಂದರ್ಭದಲ್ಲಿ ಪರಿಹಾರ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಸರ್ಕಾರವೇ ಗಮನಿಸಿ ಕೂಡಲೇ ಪೂರ್ಣ ಪರಿಹಾರ ಕೊಡಬೇಕಾದುದು ಕರ್ತವ್ಯ. ಹತ್ತು ತಿಂಗಳ ಹಿಂದೆ ಅವರ ವಾಹನ ಸುಟ್ಟು ಎಲ್ಲ ಆಗಿದೆ, ಸರ್ಕಾರಕ್ಕೆ ವರದಿ ಬಂದಿದೆ, ಪೋಲೀಸರು ತಪಾಸಣೆ ಮಾಡಿದ್ದಾರೆ. ಎಲ್ಲ ಮಾಡಿದ್ದರೂ ಇವತ್ತಿನವರೆಗೆ ಆದಕ್ಕೆ ಪರಿಹಾರ ಕೊಡತಕ್ಕ ವ್ಯವಸ್ಥೆ ಸರ್ಕಾರ ಏತಕ್ಕೆ ಮಾಡಿಲ್ಲ ಇದಕ್ಕೆ ಕಾರಣವೇನು? ಇದರಲ್ಲೇನಾದರೂ ರಾಜಕೀಯ ಉಂಟೆ? ಅವರು ರೈತ ಸಂಘದವರು, ರೈತ ಸಂಘದ ಮುಖಂಡರು, ಅವರಿಗೆ ಏತಕ್ಕೆ ಹಣ ಕೊಡಬೇಕೆಂಬ ಭಾವನೆ ಇದ್ದರೆ ಸ್ಪಷ್ಟಪಡಿಸಿ, ಇಲ್ಲದಿದ್ದರೆ ತಕ್ಷಣ ಕೊಡುತ್ತೇವೆ, ಈಗ ಮಾಡಿರತಕ್ಕದ್ದು ಲೋಪವಾಗಿದೆ ಎಂಬ ಮಾತನ್ನು ಸ್ಪಷ್ಟಪಡಿಸಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಶಾಸಕರಾಗಿರತಕ್ಕ ಶ್ರೀ ಪುಟ್ಟಣ್ಣಯ್ಯನವರು ನನಗೆ ಲಿಖಿತ ಮೂಲಕ ಈ ವಿಚಾರದಲ್ಲಿ 3 ತಿಂಗಳ ಹಿಂದೆ ನನ್ನ ಗಮನಕ್ಕೆ ತಂದಿದ್ದಾರೆ. 2-3 ಸಾರಿ ಈ ವಿಚಾರದಲ್ಲಿ ಪ್ರಸ್ತಾಪ ಸಹಿತ ಮಾಡಿದ್ದಾರೆ. ಪ್ರೊ;ನಂಜುಂಡಸ್ವಾಮಿಯವರ ಕಾರು ಉರ್ದು ರೈಯಟ್ಸ್‌ನಲ್ಲಿ ಸುಟ್ಟುಹೋಗಿರತಕ್ಕದ್ದು ನಿಜ. ಅವರಿಗೆ ನಷ್ಟವಾಗಿರತಕ್ಕದ್ದು ನಿಜ. ಆದರೆ ಇವತ್ತಿನ ಸರ್ಕಾರದಲ್ಲಿರತಕ್ಕ ಕಾನೂನಿನಲ್ಲಿ ಇಂಥ ವಿಚಾರಗಳಲ್ಲಿ ಪರಿಹಾರ ಕೊಡಲಿಕ್ಕೆ ಅವಕಾಶ ಇಲ್ಲದಿರುವುದರಿಂದ, ಆದರೂ ಸರ್ಕಾರ ಯಾವುದಾದರೂ ಒಂದು ರೀತಿಯಲ್ಲಿ ಪರಿಹಾರ ಕೊಡಬೇಕೆಂಬ ಮನಸ್ಸು ಇರುವುದರಿಂದ ಇದರ ಬಗ್ಗೆ ಈ ಪತ್ರವನ್ನು ನಾನು ಡಿಸ್‌ಪೋಸ್ ಮಾಡುವುದಕ್ಕೆ ಹೋಗಿಲ್ಲ. ನಾನೂ ಸಹಿತ ಶಿಫಾರಸ್ಸು ಮಾಡಿ ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಯಾವ ರೀತಿಯಲ್ಲಿ ಪರಿಹಾರ ಕೊಡಬೇಕು, ಎಷ್ಟು ಕೊಡಬೇಕೆಂಬ ಬಗ್ಗೆ ಪರಿಶೀಲನೆಯನ್ನು ಸರ್ಕಾರ ಮಾಡುತ್ತಿದೆ ಎಂಬುದನ್ನು ಮಾನ್ಯ ಶಾಸಕ ಮಿತ್ರರಿಗೆ ಶ್ರೀ ನಾಗರಾಜು ಅವರಿಗೆ ಮತ್ತು ಶ್ರೀ ಪುಟ್ಟಣ್ಣಯ್ಯನವರಿಗೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಹತ್ತು ತಿಂಗಳಾಯಿತು, ಆದರೂ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಲ್ಲ. ಏನಾದರೂ ಒಂದು ನಿರ್ಧಾರಕ್ಕೆ ಬನ್ನಿ. ಸರ್ಕಾರಕ್ಕೆ ಕೊಡುವುದಕ್ಕಾಗುತ್ತದೆ ಅಥವಾ ಇಲ್ಲ ಎಂಬ ನಿರ್ಧಾರಕ್ಕೆ ಬನ್ನಿ. ಹತ್ತು ತಿಂಗಳುಗಳಿಂದ ಒಂದೇ ಸಮನೆ ಪರಿಶೀಲನೆ ಮಾಡುತ್ತಿದ್ದರೆ ಹೇಗೆ? ತಾವು ಸ್ಪಷ್ಟವಾಗಿ ಹೇಳಿ, ಇಷ್ಟು ದಿವಸಗಳಲ್ಲಿ ನಾವು ತೀರ್ಮಾನ ಮಾಡಿಕೊಡುತ್ತೇವೆಂದು ಹೇಳಿ.

ಶ್ರೀ ಎಸ್.ಕೃಷ್ಣಪ್ಪ:- ಪ್ರೊ।। ನಂಜುಂಡಸ್ವಾಮಿಯವರ ಕಾರು ಸುಟ್ಟು ಹೋದುದಕ್ಕೆ ಮಾತ್ರ ಕೊಡುತ್ತೀರೋ ಅಥವಾ ಇದೇ ರೀತಿ ಬೇರೆಯವರ ಕಾರು, ಸ್ಕೂಟರ್, ಮೋಟಾರ್ ಗಾಡಿ ಸುಟ್ಟು ಹೋದಾಗಲೂ ಪರಿಹಾರ ಕೊಡುತೀರೋ ಎಂಬುದನ್ನು ಸರ್ಕಾರ ಹೇಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಈ ವಿಚಾರದಲ್ಲಿ ಈ ರೀತಿಯ ಜಿಜ್ಞಾಸೆಗಳು ಇರುವುದರಿಂದಲೇ ಅದು ತಡವಾಗಿರುವುದು. ಯಾವ ರೀತಿ ಕೊಡಬೇಕು, ಎಷ್ಟು ಕೊಡಬೇಕೆಂಬ ಬಗ್ಗೆ ನಾನು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ನನ್ನ ತಕರಾರು ಏನು ಇಲ್ಲ. ಅವರ ಬಗ್ಗೆ, ಅವರ ಹೋರಾಟದ ಬಗ್ಗೆ, ಅವರಿಗೆ ಆಗಿರತಕ್ಕ ಕಷ್ಟದ ಬಗ್ಗೆ....

ಶ್ರೀ ವಾಟಾಳ್ ನಾಗರಾಜ್:- ನಾನು ಹೇಳುವುದು ಕೃಪೆ ಅಲ್ಲ. ಸರ್ಕಾರಕ್ಕೆ ಕೈಮುಗಿದು ಕೊಡಿ ಎಂದು ಕೇಳುವುದಿಲ್ಲ. ಇದು ಸರ್ಕಾರದ ಕರ್ತವ್ಯ. ಸರ್ಕಾರ ಈವರೆಗಾಗಲೇ

ಕೊಡಬೇಕಾಗಿತ್ತು. ಸರ್ಕಾರ ಕೃಪೆಗೋಸ್ಕರ, ಕರುಣೆಗೋಸ್ಕರ ಕೊಡಬೇಕಾಗಿಲ್ಲ. ಸರ್ಕಾರದಲ್ಲಿ ಅವತ್ತು ಶಾಂತಿ ಭಂಗವಾಗಿರುವಾಗ ಸರ್ಕಾರ ಇದಕ್ಕೆ ಹೊಣೆ. ಅವರಲ್ಲ ಹೊಣೆ. ಸರ್ಕಾರದಲ್ಲಿ ಅವರ ಕಾರು ಬರತಕ್ಕ ವ್ಯವಸ್ಥೆ ಆಗದೆ ಆ ಪರಿಸ್ಥಿತಿ ನಿರ್ಮಾಣವಾಗಿರಬೇಕಾದರೆ ಅದಕ್ಕೆ ಸರ್ಕಾರ ಕಾರಣವೇ ಹೊರತು ಬೇರೆ ಅಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಅವತ್ತು ಪೋಲೀಸರು ಒಬ್ಬರೂ ಇರಲಿಲ್ಲ. ಪೋಲೀಸ್ ಠಾಣೆಯಲ್ಲಿ ಜನರ ರಕ್ಷಣೆಗೆ ಯಾರೂ ಪೋಲೀಸರು ಇಲ್ಲದಿರುವ ಕಾರಣ ಇಂಥ ಅನಾಹುತವಾಯಿತು. ರಕ್ಷಣೆ ಇದ್ದಿದ್ದರೆ ಇಂಥ ಅನಾಹುತವಾಗುತ್ತಿರಲಿಲ್ಲ. ಇದಕ್ಕೆ ಸರ್ಕಾರವೇ ಹೊಣೆ.

ಅಧ್ಯಕ್ಷರು:- ಆದಷ್ಟು ಬೇಗ ಸೆಟಲ್ ಮಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಇಲ್ಲಿ ಕೃಪೆ, ಕರುಣೆ ಪ್ರಶ್ನೆ ಉದ್ಭವವಾಗಲೂ ಇಲ್ಲ, ನಾನು ಹೇಳಲೂ ಇಲ್ಲ. ನಾನು ಇಷ್ಟೇ ಹೇಳಿದೆ, ಇವತ್ತು ಇರತಕ್ಕ ಕಾನೂನಿನ ಚೌಕಟ್ಟಿನೊಳಗೆ ಇದಕ್ಕೆ ಅವಕಾಶ ಇಲ್ಲ. ಆದುದರಿಂದ ಇದು ತಡವಾಗಿದೆ. ಆದರೂ ಇದನ್ನು ಸರ್ಕಾರ ಅಲ್ಲಗಳೆದಿಲ್ಲ. ಇದನ್ನು ಕೊಡತಕ್ಕದ್ದು ಹೇಗೆ. ಎಷ್ಟರಮಟ್ಟಿಗೆ, ಯಾವ ಸಂದರ್ಭದಲ್ಲಿ ಇದು ಆಗಿದೆ ಎಂಬುದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆಂಬ ವಿಚಾರವನ್ನು ಹೇಳಿದೆ.

5. ಕನ್ನಂಬಾಡಿ ಕಟ್ಟೆ ತುಂಬಿರುವುದರಿಂದ ಮುಖ್ಯ ಮಂತ್ರಿಗಳಿಂದ ಪೂಜೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಮಾನ್ಯ ಅಧ್ಯಕ್ಷರೆ, ಕನ್ನಂಬಾಡಿ ಕಟ್ಟೆ ತುಂಬಿರತಕ್ಕದ್ದು ನಮಗೆಲ್ಲರಿಗೆ ಹರ್ಷ ತಂದಿದೆ. ನಮ್ಮ ಜಿಲ್ಲೆಯ ಜನರಿಗೆ, ರಾಜ್ಯದ ಜನರಿಗೆ ಕಾವೇರಿ ತಪ್ಪಲಿನಲ್ಲಿರತಕ್ಕ ನಮಗೆಲ್ಲರಿಗೆ ಹರ್ಷ ತಂದಿರತಕ್ಕ ವಿಚಾರ ತಮಗೂ ಸಹ ಗೊತ್ತಿರತಕ್ಕದ್ದು. ಯಾವಾಗ ಕನ್ನಂಬಾಡಿ ಕಟ್ಟೆ ತುಂಬುತ್ತದೆ ಆಗ ಸರ್ಕಾರದ ಪರವಾಗಿ ಮುಖ್ಯ ಮಂತ್ರಿಗಳು ಬಂದು ಪೂಜೆ ಮಾಡತಕ್ಕದ್ದು ಪ್ರತೀತಿ. ಆದ್ದರಿಂದ ಮಾನ್ಯ ಉಪಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ. ಸರ್ಕಾರದ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಯಾವಾಗ ಬಂದು ಪೂಜೆ ಈಡೇರಿಸುತ್ತಾರೆಂಬುದನ್ನು ಸ್ಪಷ್ಟಪಡಿಸಬೇಕು. ಏಕೆಂದರೆ ಜಿಲ್ಲೆಯ ಎಲ್ಲ ಜನರೂ ಕಾಯುತ್ತಿದ್ದಾರೆ. ಅದರಲ್ಲೂ ಬಹುತೇಕ ಎಲ್ಲ ಶಾಸಕರು, ನಮ್ಮ ಭಾಗದವರು ಕಾಯುತ್ತಿದ್ದಾರೆ. ದಯವಿಟ್ಟು ಮಾನ್ಯ ಉಪ ಮುಖ್ಯ ಮಂತ್ರಿಗಳು ಸರ್ಕಾರದ ಪರವಾಗಿ ಸ್ಪಷ್ಟಪಡಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀಮತಿ ಪ್ರಮಿಳಾ ನೇಸರ್ಗಿ:- ಅಲ್ಲಿ ಜನ ಹೊಡೆಯುವುದಕ್ಕೆ ಕಾಯ್ದುಕೊಂಡಿದ್ದಾರೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಈ ಮಾತನ್ನು ಅವರು ವಾಪಸ್ಸು ತೆಗೆದು ಕೊಳ್ಳಬೇಕು. ಹೊಡೆಯುವುದಕ್ಕೆ ನಾವೆಲ್ಲ ಅಲ್ಲಿ ಇರುತ್ತೇವೆ. ಮುಖ್ಯ ಮಂತ್ರಿಗಳು ಬಂದರೆ ಹೊಡೆಯುವುದಕ್ಕೆ ಕಾಯ್ದುಕೊಂಡಿರುತ್ತಾರೆಂಬ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ-ಮುಖ್ಯ ಮಂತ್ರಿಗಳು ಬಂದರೆ ಪೂಜೆ ಮಾಡುತ್ತಾರೆ. ಸರಿಯಾಗಿ ಪೂಜೆ ಮಾಡುತ್ತಾರೆ.

(ಗೊಂದಲ)